# ಅಂಗೈಯಲ್ಲಿ ಅರಮನೆ

## ತೊಟ್ಟಿಲು ಇಲ್ಲದ ಆಸ್ಪತ್ರೆ



ಪಕ್ಕದ ಮನೆಯ ಗೆಳತಿಯ ಅಜ್ಜಿ ತಮ್ಮ ಮೊಮ್ಮಗಳನ್ನು ನೋಡಲು ಹತ್ತಿರದ ಹಳ್ಳಿಯಿಂದ ಅವರ ಮನೆಗೆ ಬಂದಿದ್ದರು. ವಿಷಯ ತಿಳಿದ ನಾನು ಅಜ್ಜಿಯನ್ನು ಮಾತನಾಡಿಸಿ ಬರಲು ಒಂದು ಸಂಜೆ ಅವರ ಮನೆಗೆ ಹೋಗಿದ್ದೆ. ಅದೇ ಸಮಯಕ್ಕೆ ಪೇಪರ್ ಓದುತ್ತಿದ್ದ ನನ್ನ ಗೆಳತಿ ತನ್ನ ಅಜ್ಜಿಗೆ 'ಅಜ್ಜಿ... ನಿಮ್ಮ ಹಳ್ಳಿ ಗೌಡರ ಮಗನಿಗೆ ಗಂಡು ಮಗು ಆಯ್ತಂತೆ! ಪೇಪರ್‌ನಲ್ಲಿ ಹಾಕಿದ್ದಾರೆ' ಎಂದು ಹೇಳಿದಳು.

ಇದನ್ನು ಕೇಳಿದ ಅಜ್ಜಿ ಖುಷಿ ಆಗುವ ಬದಲು ಗಾಬರಿಯಿಂದ, 'ಅಯ್ಯೋ ದೇವರೇ, ಅದ್ಯಾವ ಬಡತನ ಬಂತು ನಮ್ಮ ಗೌಡರಿಗೆ? ಹೋಗಿ ಹೋಗಿ ತೊಟ್ಟಿಲು ಇಲ್ಲದ ಆಸ್ಪತ್ರೆಗೆ ಸೊಸೆಯನ್ನು ಸೇರಿಸಿ, ಈಗ ನೋಡಿದರೆ ಮಗುವನ್ನು ಪೇಪರ್‌ಗೆ ಹಾಕಿದ್ದಾರೆ' ಎಂದು ಬೊಬ್ಬೆ ಹಾಕಿದರು. ಆಗ ನನ್ನ ಗೆಳತಿ ತಾನು ವಿಷಯ ತಿಳಿಸಿದ ರೀತಿ ಅಪಾರ್ಥಕ್ಕೆ ಅವಕಾಶ ಮಾಡಿಕೊಟ್ಟ ಅರಿವಾಗಿ ಕೂಡಲೇ, 'ಅಲ್ಲ ಅಜ್ಜಿ, ಗಂಡು ಮಗು ಹುಟ್ಟಿದ ವಿಷಯ ಪೇಪರ್‌ನಲ್ಲಿ ಪ್ರಕಟಿಸಿದ್ದಾರೆ, ಮಗುವನ್ನು ಅಲ್ಲಾ' ಎಂದಾಗ ಅಜ್ಜಿ ಸಮಾಧಾನದ ನಿಟ್ಟುಸಿರುಬಿಟ್ಟರು.

**ಜಯಮಾಲಾ ಪೈ**

---

## ಮಂಗ ಇಳಿ!



ಇತ್ತೀಚೆಗೆ ನಾವು ಜಮ್ಮು–ಕಾಶ್ಮೀರದ ಪ್ರವಾಸಕ್ಕೆ ಹೋಗಿದ್ದಾಗ ಅಲ್ಲಿ ನಡೆದ ಒಂದು ತಮಾಷೆ ಘಟನೆ. ಕಾಶ್ಮೀರದಲ್ಲಿ ಬೇರೆ ಬೇರೆ ಸ್ಥಳಗಳನ್ನು ನೋಡಲು ನಾವು ಒಂದು ಮಿನಿ ಬಸ್ಸಿನಲ್ಲಿ ಹೋಗಿದ್ದೆವು. ಪ್ರತಿಯೊಂದು ಸ್ಥಳದಲ್ಲೂ ಇಳಿದು ನೋಡಿ ಹಿಂತಿರುಗಿ ಬರುತ್ತಿದ್ದೆವು. ಒಮ್ಮೆ ನನ್ನ ಮೊಮ್ಮಗಳು ನಿತ್ಯಾ, ಬಸ್ಸಿನಿಂದ ಇಳಿಯದೇ ಎಲ್ಲೋ ನೋಡುತ್ತಾ ಕುಳಿತಿದ್ದಳು. ನಾನು ಅವಳಿಗೆ 'ಏಯ್ ಮಂಗ ಇಳಿ!' ಎಂದು ಗದರಿಸಿ ಹೇಳಿದೆ.

ಮುಂದಿನ ಸ್ಥಳದಲ್ಲಿ ಬಸ್ಸು ನಿಂತಾಗ ನಮ್ಮ ಬಸ್ಸಿನ ಡ್ರೈವರ್ ನನ್ನ ಮೊಮ್ಮಗಳಿಗೆ 'ಏಯ್ ಮಂಗ ಇಲಿ!' ಎಂದು ಹೇಳಿದ. ಅದನ್ನು ಕೇಳಿದ ನಾವೆಲ್ಲರೂ ಬಿದ್ದುಬಿದ್ದು ನಕ್ಕೆವು. ಅದನ್ನು ನೋಡಿ ಡ್ರೈವರ್ ಗಾಬರಿಯಾಗಿ ಯಾಕೆ ಎಂದು ಕೇಳಿದ. ಕನ್ನಡ ಭಾಷೆ ಗೊತ್ತಿಲ್ಲದ ಆ ಕಾಶ್ಮೀರದ ಡ್ರೈವರ್ ಆಕೆಯ ಹೆಸರು 'ಮಂಗ' ಎಂದುಕೊಂಡಿದ್ದ. ಆಗ ನನ್ನ ಅಳಿಯ ಆಕೆಯ ಹೆಸರು ಮಂಗ ಅಲ್ಲ, ಕನ್ನಡದಲ್ಲಿ ಮಂಗ ಅಂದರೆ ಬಂದರ್ ಎಂದು ಅರ್ಥ ಎಂದು ಡ್ರೈವರ್‌ಗೆ ಹಿಂದಿಯಲ್ಲಿ ತಿಳಿಸಿ ಹೇಳಿದಾಗ ಆತನ ಜೊತೆ ಮತ್ತೊಮ್ಮೆ ನಗುವ ಸರದಿ ನಮ್ಮದಾಗಿತ್ತು.

**ವಾಣಿಶ್ರೀ ಸಾಹುಕಾರ್**